# ಪ್ರೀತಿ ಇಲ್ಲವಾದ ರೀತಿ

**14 ಫೆಬ್ರುವರಿ 2006 09:40:56**

ಹಾಯ್ ನೇಹಾ,

ನನಗೆ ಗೊತ್ತು ಇದು ನಾನು ಮಾಡ್ತಾ ಇರೋ ಹುಚ್ಚುತನದ ಕೆಲಸ ಅಂತ. ಆದ್ರೂ ಇದನ್ನು ಮಾಡದೇ ನಾನು ಬದುಕಲಾರೆ ಅನ್ನುವಷ್ಟು ಹತಾಶನಾಗ್ತೀದೀನಿ, ಅದಕ್ಕೇ ಈ ಇ-ಮೇಯ್ಲು.

ಹೃದಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ನಾನು ತೀರಾ ಅಳ್ಳೆದೆಯವನು. ನನ್ನ ಹೃದಯದ ವೀಣೆಯನ್ನು ಮೀಟಿ, ತಾರಕಕ್ಕೇರಿಸುವಂತಹ ಯಾವ ಹುಡುಗಿಯನ್ನು ಕಂಡರೂ ತಕ್ಷಣ ನನಗೆ ನನ್ನದೇ ಕೊರತೆಗಳ ನೆನಪಾಗುತ್ತಿತ್ತು. ಆಗೆಲ್ಲ ನಾನವಳಿಗೆ ಅರ್ಹನಲ್ಲವೇನೋ, ನನಗಿಂತಲೂ ಒಳ್ಳೆಯ ಹುಡುಗ ಆಕೆಗೆ ಸಿಗಬಹುದೇನೋ ಅಂತೆಲ್ಲ ಯೋಚಿಸಿಕೊಂಡು ನನಗೆ ನಾನೇ ಸಮಾಧಾನ ಮಾಡಿಕೊಳ್ಳುತ್ತಿದ್ದೆ. ಆದರೂ ನನ್ನ ಹೃದಯವೀಣೆಯನ್ನು ಮೀಟಿದ ಹುಡುಗಿಯರು (ನನ್ನ typeನ ಹುಡುಗಿಯರು ☺) ತುಂಬಾ ಕಡಿಮೆ. ಮತ್ತು ನನ್ನ ಅಳಿದುಳಿದ ಧೈರ್ಯವನ್ನೆಲ್ಲ ಕಲೆಹಾಕಿ ಹೇಳಲೇ ಬೇಕು ಅಂದು ಕೊಂಡದ್ದು ಮಾತ್ರ ಇದೇ ಮೊದಲು ನೇಹಾ. ಹೌದು, ನೀನೇ ಈ ಧೈರ್ಯವನ್ನು ನನ್ನೊಳಗೆ ತುಂಬಿದವಳು.

ನೀನೆ ಯಾಕೆ? ಅಂತ ನೀನು ಕೇಳಬಹುದು. ಉತ್ತರ ಬಹು ಸುಲಭ. opposites attract ಅನ್ನೋ ಹಾಗೇ ನಾನು ನನ್ನ ನಡೆನುಡಿಗಳಲ್ಲಿ ಬಹಳ ಗೊಂದಲದ ಮನುಷ್ಯ. ಹೊಸಬರೇ ಇರುವ ಗುಂಪಿನಲ್ಲಂತೂ ನಾನು ಹೇಗೆ ಮಾತನಾಡಬೇಕು, ಹೇಗೆ ನಡೆದುಕೊಳ್ಳಬೇಕು ಎಂದು ತಿಳಿಯದೇ ಬೆವೆತು ನೀರಾಗಿಬಿಡುವ ಪರಮ ಮನುಷ್ಯ ದ್ವೇಷಿ. ನಿನ್ನ ನಯವಾದ ನಡೆನುಡಿಗಳು, ಸುಮ್ಮನಿದ್ದೂ ಆಕರ್ಷಿಸಿಕೊಂಡುಬಿಡುವ ವ್ಯಕ್ತಿತ್ವ ಮತ್ತು ಹೆಚ್ಚಿಗೆ ಮಾತಿಲ್ಲದಿದ್ದರೂ ಎರಡೆರಡೇ ಮಾತುಗಳಲ್ಲಿ ಎದುರಿನವರ ನಾಡಿ ಹಿಡಿದು ಬಿಡುವ ನಿನ್ನ ಮೌನದೊಳಕ್ಕೆ ಏನೇನೂ ವಿರೋಧವಿಲ್ಲದೆ ನಾನು ಬಿದ್ದೆ. ಹೌದು, ನಿನ್ನ ನಡೆನುಡಿಯಂತೆ ನಿನ್ನ ಮೌನವೂ ನನಗಿಷ್ಟವಾಯ್ತು. ಇದು ನಮ್ಮಿಬ್ಬರೊಳಗಿರುವ ಸಮಾನ ಅಂಶ. ಅವಶ್ಯಕತೆಯಿಲ್ಲದೇ, ತಲೆ ಹೋಗುವ ಸಂದರ್ಭ ಬಾರದೇ ನನ್ನೊಳಗಿನ ಯೋಚನೆ ಮಾತಾಗಿ ಹೊರಗೆ ಬಾರದು. ನಾನು ತುಂಬಾ ಅಂಟುಪುರಲೆ, ಹೊಸಬರನ್ನು ಪರಿಚಯ ಮಾಡ್ಕೊಳ್ಳೋಕೆ, ಸ್ನೇಹ ಬೆಳೆಸೋಕೆ ತುಂಬಾ ಸಮಯ ತಗೋತೀನಿ. ಹಾಗಾಗಿಯೇ ನಿನ್ನಂತೆಯೇ ನನಗೂ ಕೆಲವೇ ಕೆಲವರನ್ನು ಬಿಟ್ಟರೆ ಬೇರೆ ಸ್ನೇಹಿತರಿಲ್ಲ, ಇವೆಲ್ಲ ಮತ್ತು ಇನ್ನೂ ಅನೇಕ ಕಾರಣಗಳಿಂದಾಗಿ ನಾನು ನಿನ್ನೆಡೆಗೆ ಆಕರ್ಷಿತನಾದೆ.

ನೇಹಾ, ಕಡೇಪಕ್ಷ ಈ ಸರ್ತಿ ಇದನ್ನೆಲ್ಲ ನನ್ನಲ್ಲಿ ಅರಿವು ಮೂಡಿಸಿದ, ಒಬ್ಬ ಅದ್ಭುತ (ನನ್ನ typeನ) ಹುಡುಗಿಯ ಜೀವನ ಸಂಗಾತಿಯಾಗಬಲ್ಲೆ ಎಂಬ ಧೈರ್ಯವನ್ನು ನನ್ನೊಳಕ್ಕೆ ತುಂಬಿದ, ಅವಳಿಗೆ ನಾನು 'worthy' ಎಂಬ ಆತ್ಮಸ್ಥೈರ್ಯ ತಂದುಕೊಟ್ಟವಳ ಮುಂದೆ ಹೇಳಿಕೊಳ್ಳಬೇಕು ಅಂದುಕೊಂಡೆ. ಹೀಗೆಲ್ಲ ಅಂದುಕೊಳ್ಳುತ್ತ ನನ್ನ ಯೋಚನೆಗಳೊಂದಿಗೆ ನನ್ನ ಹೃದಯ-ದೇಹಗಳೂ ಹಗುರಾಗಿ ಆಕಾಶದಲ್ಲಿ ತೇಲುತ್ತಿದ್ದೇನೆಯೋ ಎಂಬ ಮತ್ತ ಭಾವ ನನ್ನನ್ನು ಆವರಿಸಿಕೊಳ್ಳುತ್ತಿದೆ, ಆ ಭಾವ ನನಗಿಷ್ಟವಾಗುತ್ತಿದೆ. ಕೆಲವೊಮ್ಮೆ, ಪ್ರೀತಿಸುವುದಕ್ಕಿಂತ, ಪ್ರೀತಿಸುತ್ತಿದ್ದೇನೆ ಎಂಬ ಯೋಚನೆಯನ್ನೇ ಪ್ರೀತಿಸುತ್ತಿದ್ದೇನೆ ಎಂಬ ಭಾವವೂ ಮೂಡುತ್ತಿದೆ, ಮತ್ತೆ ಅದೂ ನನಗಿಷ್ಟವಾಗುತ್ತಿದೆ. ಥ್ಯಾಂಕ್ಸ್ ನೇಹಾ, ನನ್ನಂತಹ ಮುಖೇಡಿಯನ್ನು ಹೀಗೆಲ್ಲ ಬದಲಾಯಿಸಿದ್ದಕ್ಕೆ.

ನಂಗೊತ್ತು, ಮನುಷ್ಯರಾದ ಮೇಲೆ, ನಮ್ಮ ಭವಿಷ್ಯದ ಬಗ್ಗೆ ನಮಗೆ ನಮ್ಮವೇ ಭಯಗಳು, ಅಭದ್ರತೆಗಳು, ಕನಸುಗಳು ಇರುತ್ವೆ. ನಾವು ಹೆಣೆದುಕೊಳ್ಳುವ ಜೀವನದ ಕನಸಿನ ಕುಸುರಿಯೊಳಕ್ಕೆ ನಮ್ಮನ್ನು ಇಷ್ಟಪಡುವ ಕೆಲವು ವ್ಯಕ್ತಿಗಳನ್ನು, ಸಂದರ್ಭಗಳನ್ನು ಹೆಣೆದುಕೊಳ್ಳಬೇಕೋ ಬೇಡವೋ ಎಂದು ನಮ್ಮ ಹೃದಯವೇ ತೀರ್ಮಾನಿಸುತ್ತದೆ. ಈ ವಿಷಯದಲ್ಲಿ ನಾನೇ ನನ್ನ ಹೃದಯವನ್ನು ಅದು ಮಾಡಲಾಗದ ಕೆಲಸಕ್ಕೆ ಒಪ್ಪಿಸಲಾರೆನೆಂದಮೇಲೆ ಬೇರೊಂದು ಹೃದಯವನ್ನು ಒಪ್ಪಿಸುವ ಮಾತೇ ಸುಳ್ಳು! ಹಾಗಾಗಿ ನನಗೇಕೋ ಇನ್ನೂ ಅನಿಸುತ್ತಾ ಇದೆ, ನಿನ್ನಂಥ ಕನಸು ಕಣ್ಣಿನವಳ ಕನಸಿನ ಕುಸುರಿಯೊಳಕ್ಕೆ ಸೇರಿಕೊಳ್ಳುವಷ್ಟು, ನಿನ್ನ ಜೀವನದ ನನಸಿನೊಳಗೆ ಇಳಿಯುವಷ್ಟು ನಾನೇನೂ 'worthy' ಅಲ್ಲ. ಇದೆಲ್ಲ ಯೋಚನೆಗಳು ಅಪಶಕುನವೆನಿಸಿ ಬೇಸರವಾಗುತ್ತಿದ್ದರೂ ಪರವಾಗಿಲ್ಲ, ನನಗೆ ಇದುವರೆಗೂ ನಿನ್ನೊಡನೆ ಚಂದ್ರಮ-ಚಕ್ರವಾಕದ ಸಾಮೀಪ್ಯ ಸಿಕ್ಕಿದುದರಲ್ಲೇ ತೃಪ್ತಿಯಿದೆ. ಹಾಗಾಗಿ ನಿನ್ನ ಉತ್ತರ ಏನಿದ್ದರೂ ನನಗೆ ಸಮ್ಮತವೇ, ಉತ್ತರಿಸಲಾರೆ ಎಂಬ ನಿಲುವು ತಳೆದರೂ ಸರಿಯೇ.

ಫೆಬ್ರುವರಿ ೧೪ರ ಈ ದಿನವನ್ನೇ ನನ್ನೀ ಹೃದಯವನ್ನು ತೆರೆದಿಡಲು ಆರಿಸಿಕೊಂಡದ್ದು ಕ್ಲೀಷೆಯೆನಿಸಿದರೂ ನಿನ್ನೆಡೆಗಿನ ನನ್ನೆದೆಯ ಎಲ್ಲ ಭಾವಗಳನ್ನೂ, ನನ್ನೆಲ್ಲ ಕೃತಜ್ಞತೆಗಳನ್ನು ನಿನಗೆ ತಲುಪಿಸಲು ಇದೇ ಸರಿಯಾದ ದಿನ ಎನಿಸಿತು, ಹಾಗಾಗಿಯೇ ಈ ಮೇಯ್ಲು.

(ನಿನ್ನ ಉತ್ತರಕ್ಕೆ ಕಾಯುತ್ತಾ)

ಮಧು,

(ಮೇಲೆ ಬರೆದಿರುವ ಎಲ್ಲಕ್ಕಿಂತ ಇದೊಂದು ಗೀತೆ ನನ್ನ ಹೃದಯವನ್ನು ನಿನ್ನೆದುರು ಸಮರ್ಥವಾಗಿ ತೆರೆದಿಡಬಹುದೇನೋ)

**For the Longest Time - A Cappella**

If you said goodbye to me tonight
There would still be music left to write
What else could I do?
I'm so inspired by you
That hasn't happened for the longest time

Once I thought my innocence was gone
Now I know that happiness goes on
That's where you found me
When you put your arms around me
I haven't been there for the longest time

I'm that voice you're hearing in the hall
And the greatest miracle of all
Is how I need you
And how you needed me too
That hasn't happened for the longest time

Maybe this won't last very long
But you feel so right, And I could be wrong
Maybe I've been hoping too hard
But I've gone this far
And it's more than I hoped for

Who knows how much further we'll go on
Maybe I'll be sorry when you're gone
I'll take my chances
I forgot how nice romance is
I haven't been there for the longest time

I had second thoughts at the start
I said to myself, Hold on to your heart
Now I know the woman that you are
You're wonderful so far
And it's more than I hoped for

I don't care what consequence it brings
I have been a fool for lesser things
I want you so bad
I think you ought to know that
I intend to hold you for the longest time

*** *** *** *** *** *** *** *** *** *** *** *** *** *** *** *** *** ***

**14 ಫೆಬ್ರುವರಿ 2006 11:05:18**

ಹಲೋ,

ನೀನು ಬರೆದುದೆಲ್ಲ ನಿಜವಾಗಿಯೂ ಹೃದಯಸ್ಪರ್ಶಿಯಾದುದು. ನಾನು ನಮ್ಮಿಬ್ಬರ ನಡುವೆ ಅಂತರವನ್ನು ಕಾಯ್ದುಕೊಂಡು ಬಂದರೂ ನೀನು ಇದನ್ನೆಲ್ಲ ಹೇಳಿದುದಕ್ಕೆ ನನಗೆ ಖುಷಿಯಾಗ್ತಿದೆ.

ಮಧು, ನನ್ನ ಜೀವನದಲ್ಲಿ ಈಗಾಗಲೇ ಒಬ್ಬ ಹುಡುಗನಿದ್ದಾನೆ. ನಾನು ಯಾವತ್ತಿಗಾದರೂ ಹೇಗಾದರೂ ವ್ಯಕ್ತಪಡಿಸಲಾಗದಷ್ಟು ಪ್ರೀತಿಸುವವನಿದ್ದಾನೆ. ಇದು ಬೇರೆಲ್ಲರ ತರಹದ ಪ್ರೇಮವಲ್ಲ ಯಾಕೇಂದ್ರೆ ನನಗೇ ಗೊತ್ತಿಲ್ಲ ನಾನೂ

ಅವನೂ ಎಂದಾದರೂ ಮದುವೆಯಾಗ್ತೀವಾ, ಒಂದಾಗಿ ಬಾಳ್ವೆ ಮಾಡ್ತೀವಾ ಅಂತ. ಆದರೆ ಈ ಕಾರಣ ಅವನೆಡೆಗಿರುವ ನನ್ನ ಭಾವನೆಗಳನ್ನು ಬದಲಾಯಿಸಲಾರದು. ಹಾಗಾಗಿ ನಾನೀಗ ಬೇರೊಬ್ಬ ಹುಡುಗನ ಕನಸನ್ನೂ ಕಾಣಲಾರೆ.

ನನ್ನ ಜೀವನದ ಈ ಪುಟಗಳ ಕತೆ ನನ್ನ ಕುಟುಂಬ ಮತ್ತು ನನ್ನ ಅತ್ಯಾಪ್ತ ಮಿತ್ರರನ್ನು ಬಿಟ್ಟರೆ ಬೇರ್ಯಾರಿಗೂ ಗೊತ್ತಿಲ್ಲ. ನೀನು ನಿನ್ನ ಹೃದಯವನ್ನೆಲ್ಲ ನನ್ನೆದುರು ತೆರೆದುಕೊಂಡಿದ್ದೀಯ. ಹಾಗಾಗಿ ನಾನೂ ನನ್ನ ಹೃದಯವನ್ನೆಲ್ಲ ನಿನ್ನೆದುರು ಬರಿದು ಮಾಡಬೇಕೆಂದುಕೊಂಡು ಇದನ್ನೆಲ್ಲ ಹೇಳಿಕೊಳ್ಳುತ್ತಿದ್ದೇನೆ, ಅಷ್ಟೇ ಅಲ್ಲ, ನೀನು ನನಗಿಷ್ಟ, ಮತ್ತು ನಿನ್ನನ್ನು ನಾನು ನಂಬುತ್ತೇನೆ.

ನನಗ್ಯಾವತ್ತೋ ಗೊತ್ತಿತ್ತು, ನೀನು ನನ್ನನ್ನು ಇಷ್ಟ ಪಡ್ತಾ ಇದೀಯಾ ಅಂತ. ನಿನ್ನ ಕನಸುಗಳನ್ನು ಇನ್ನಷ್ಟು ಬೆಳೆಯಗೊಡಲು ನನಗಿಷ್ಟವಿರಲಿಲ್ಲ. ಹಾಗಾಗಿ ನಾವು chat ಮಾಡೋಕೆ ಶುರುಮಾಡಿದಾಗ ನನ್ನನ್ನು ನಾನೇ ಅವಶ್ಯಕತೆಗಿಂತ ಜಾಸ್ತಿ ತೆರೆದುಕೊಳ್ತಿದೀನಿ ಅಂತೆನಿಸಿ ಅಂತರ ಕಾಯ್ದುಕೊಳ್ಳೋಕೆ ಅಂತ ಅದನ್ನೂ ನಿಲ್ಲಿಸಿಬಿಟ್ಟೆ.

ನಾನು ಇನ್ನೂ ಒಂದು ವಿಷಯ ಹೇಳಬೇಕು ನಿನಗೆ. ನೀನು ತುಂಬ ಒಳ್ಳೇ ಹುಡುಗ, ಪದಗಳೊಂದಿಗಿರುವ ನಿನ್ನ ಕಲಾತ್ಮಕತೆ ಅದ್ಭುತ. ನಿನ್ನ ಪದಗಳಲ್ಲಿ, ಆಳವಿದೆ, ನಿನ್ನ ಅಂತರಾಳವೇ ಇದೆ. ಈ ಇ–ಮೇಯ್ಲು ಕಳಿಸುವಷ್ಟು ನನ್ನನ್ನು ನೀನು ಮೆಚ್ಚಿರುವುದನ್ನು ಕಂಡು ನನಗೆ ಹೆಮ್ಮೆಯಾಗ್ತಿದೆ. ನನಗ್ಗೊತ್ತು, ನಿನ್ನ ಜೀವನದಲ್ಲಿ ಬರುವ ಹುಡುಗಿಯನ್ನು ತುಂಬಾ ಖುಷಿಯಾಗಿಡ್ತೀಯ. ಮತ್ತೆ ಇದೆಲ್ಲವನ್ನು ನಾನು ನನ್ನ ನಕಾರಾತ್ಮಕ ಉತ್ತರ ತರಬಹುದಾದ ವಿಷಾದದ ಛಾಯೆಯನ್ನು ತಿಳಿಗೊಳಿಸಲು ಹೇಳ್ತಾ ಇಲ್ಲ, I really mean it

ಹೌದು, ನೀನು ಬರೆದಿರೋದು ನಿಜ, ಪ್ರೀತಿಸೋದು, ಪ್ರೀತಿಯ ಅಮಲಿನಲ್ಲಿರೋದು ಉನ್ಮತ್ತತೆಯ ಭಾವವೇ ಸರಿ. ಆದರೆ ಆ ಉನ್ಮತ್ತತೆಯ ಭಾವದ ಗುಳ್ಳೆಯನ್ನು ಈಗಲೇ ಒಡೆದು ಹಾಕುತ್ತಿರುವುದಕ್ಕೆ ಕ್ಷಮಿಸು.

ಇದೆಲ್ಲದರಿಂದ ನೀನೇ ನಿನಗಿಷ್ಟವಾಗುವಂತೆ ಬದಲಾಗಿದ್ದೀಯ ಅಂದರೆ ನನಗೆ ಸಂತೋಷ. ಮತ್ತಿನ್ನೊಂದು ವಿಷಯ. ಯಾವ ಹುಡುಗರ ಗುಂಪಿನೊಳಗೂ ನೀನು ಅಲ್ಪರಿಯಬೇಕಾಗಿಲ್ಲ. ನೀನು ನಿಜವಾಗಿಯೂ ಒಳ್ಳೇ ಹುಡುಗ, ನಿನ್ನ ಬಗ್ಗೆ ನಿನಗೇ ಒಳ್ಳೆಯದೆನಿಸಬೇಕು. ನೀನು ಯಾವುದಾದರೂ (ನಿನ್ನ typeನ) ಹುಡುಗಿಗೆ 'worthy'ಯಾ ಅಂತ ಸಂದೇಹಪಡುವ ಹಾಗೇ ಇಲ್ಲ.

I hope you are fine, and I really wish you lots of love in your life.

Really,

ನೇಹಾ

*** *** *** *** *** *** *** *** *** *** *** *** *** *** *** *** *** ***

**14 ಫೆಬ್ರುವರಿ 2006 17:01:09**

ಹಾಯ್ ನೇಹಾ,

ನಿನ್ನುತ್ತರಕ್ಕೆ ಧನ್ಯವಾದಗಳು. ನನ್ನ ಹೃದಯದೊಳಗಿದ್ದುದನ್ನೆಲ್ಲ ನಿನ್ನೆದುರು ತೆರೆದಿಟ್ಟ ಮೇಲೆ, ಅದಕ್ಕೆ ನೀನು ಉತ್ತರ ಕೊಟ್ಟ ಮೇಲೆ ಈಗ ನನಗೆ ನಿಜವಾಗಿಯೂ ನೆಮ್ಮದಿಯೆನಿಸುತ್ತಿದೆ. ನಿಜವಾಗಿಯೂ ನೋವಾಗುತ್ತಿದ್ದರೂ ಈ ನೋವು ನಾವು ಒಬ್ಬರ ಬಗೆಗೆ ಏನೆಲ್ಲ ಕನಸಿಸುತ್ತಿದ್ದೇವೆ ಎಂದು ಹೇಳಿಕೊಳ್ಳದೇ ನಡೆದು ಹೋಗಿಬಿಡುವ ನೋವಿಗಿಂತ ಎಷ್ಟೋ ಪಾಲು ಮೇಲೆಂದು ಸಮಾಧಾನವಾಗುತ್ತಿದೆ.

ಹಾಗಾಗಿ ಇನ್ನು ಮುಂದೆ ಕಣ್ಣು ಮುಚ್ಚಾಲೆಯಾಟ ಬೇಡ. ಮೊದಲೇ ಹೇಳಿದಂತೆ ಈ ಸಾಂಗತ್ಯದಿಂದ ನನಗೇನು ದಕ್ಕಿದೆಯೋ ಅದರಿಂದಲೇ ನಾನು ಸಂತೃಪ್ತ. ಈಗ ಹೊಸದಾಗಿ ನಾನು ಸ್ನೇಹ ಹಸ್ತ ಚಾಚುವಷ್ಟು ಗುಣ ಹೊಂದಿಲ್ಲ ನಾನು, ಹಾಗಾಗಿ ಮೊದಲಿದ್ದಂತೆಯೇ ಆಗೀಗೊಂದು ಎಸ್ಸೆಮ್ಮೆಸ್ಸು, chat, ಯುಗಾದಿಗೋ, ದೀಪಾವಳಿಗೋ ಒಂದೊಂದು ಎನಿಸುವಂತೆ ಕರೆಗಳು. Nothing more and nothing less...

ನಿನ್ನ ಉತ್ತರ ಬರುವವರೆಗೂ ನನಗೆ ಸತ್ತುಹೋಗಿಬಿಡುವಷ್ಟು ಮುಜುಗರ, ಕಿರಿಕಿರಿಯಾಗಿಬಿಟ್ಟಿತು. ನಿನ್ನುತ್ತರ ಅವೆಲ್ಲದಕ್ಕೂ ಪರಿಹಾರವಾಗಿ ಬಂದಿದೆ, ಬೋರಲು ಬಿದ್ದು ಬಿಕ್ಕುತ್ತಿರುವವನ ಎದೆಗೆ, ಮೆತ್ತನೆಯ ಹಾಸಿಗೆಯ ಅಡಿಯಿರುವ ಕಲ್ಲ ಹರಳುಗಳು ಒತ್ತುವಂತೆ ಒತ್ತುತ್ತಿದ್ದರೂ, ನಿಜವಾಗಲಾರದೊಂದು ಕನಸಿನ ನಿರೀಕ್ಷೆ ಮುಗಿದುಹೋದ ನೆಮ್ಮದಿ ತಂದಿದೆ. ಹಾಗೂ ಈ ತಿಂಗಳುಗಳಲ್ಲೆಲ್ಲ ಈ ಪ್ರೇಮಭಾವ ನನ್ನಲ್ಲಿ ಮೂಡಿಸಿದ್ದ ಆತ್ಮ ಸ್ಥೈರ್ಯವನ್ನು ಮತ್ತಷ್ಟು ಬಲಗೊಳಿಸಿದೆ.
Lets hope I would be worthy of someone special :P

ಥ್ಯಾಂಕ್ಸ್ ನೇಹಾ,

*** *** *** *** *** *** *** *** *** *** *** *** *** *** *** *** *** ***

**14 ಫೆಬ್ರುವರಿ 2006                                        17:25:48**

Nothing more and nothing less"  ಇದು ನನ್ನ ವಾಕ್ಯವೂ ಹೌದು. ನಾನೂ ಸಾಮಾನ್ಯವಾಗಿ ಇದನ್ನು ಉಪಯೋಗಿಸ್ತೀನಿ.
ನೀನು ಸಮಾಧಾನವಾಗಿದ್ದೀಯ ಅಂತ ಗೊತ್ತಾಗಿ ನೆಮ್ಮದಿಯಾಗ್ತಿದೆ.
ಮತ್ತು ಇವೆಲ್ಲ ಭಾವಗಳೂ ಗೊಂದಲಗಳೂ ಮಾತಾಗಿ ಹೊರಹೊಮ್ಮಿ, ಅರ್ಥವಾಗಿ, ಮುಗಿದುಹೋದುದಕ್ಕೆ ಒಂಥರಾ ಖುಷಿಯೂ ಆಗ್ತಿದೆ.

You take care, and lots of special things will come your way.

:)

*** *** *** *** *** *** *** *** *** *** *** *** *** *** *** *** *** ***

**ನನ್ನದೆಲ್ಲವನ್ನು ತೆರೆದು,**
**ನಿನ್ನೊಲವಿಗೆ ಧಾರೆಯೆರೆದು**
**ನನ್ನತನವನೆಲ್ಲ ಮರೆತು,**
**ನಿನ್ನೊಳಗೆ ನಾನು ಬೆರೆತು, ನಾನು ನಾನಲ್ಲ, ನೀನೇ ನಾನೆಲ್ಲ.**

**ಹ್ಯಾವ್ ಎ ನೈಸ್ ಡೇ**

**ಶಿವಕುಮಾರ ಕೆ. ಎಸ್.** ***ks_shivu@yahoo.com***